ಸವಿ ಸವಿ ನೆನಪು..

# ಹೈದರಾಬಾದ್ ಸುತ್ತಿದ್ದು.. ಬಿರಿಯಾನಿ ತಿಂದಿದ್ದು..

■ ಸಹನಾ ಕಾಂತಬೈಲು

ಕೆಲವು ತಿಂಡಿಗಳು, ಅದನ್ನು ಸವಿದ ಕ್ಷಣಗಳು, ಸವಿಯಲು ಪಟ್ಟ ಪಾಡು, ಕೊನೆಗೂ ಆ ತಿಂಡಿ ಸಿಕ್ಕ ಕ್ಷಣ ಮತ್ತು ಹೆಚ್ಚಿನ ನಿರೀಕ್ಷೆ ಹುಟ್ಟಿಸಿದ ತಿಂಡಿ ಸವಿದಾಗ ಅದರಲ್ಲೇನೂ ವಿಶೇಷತೆ ಕಾಣುವುದು ಹಾಗೂ ಕೆಲವೊಮ್ಮೆ ಕಾಣದೇ ಇರುವುದು ಕೂಡ ಸವಿ ನೆನಪಾಗಿ ಉಳಿಯುತ್ತದೆ.

ಕಳೆದ ವರ್ಷ ನಾನು, ಗೆಳತಿ ಸ್ಮಿತಾ, ಅವಳ ಗಂಡ ಅಮೃತರಾಜ್ ಮಗಳು ಮನಾಲಿ ಹೈದರಾಬಾದಿನ ಮೌಲಾನಾ ಆಝಾದ ರಾಷ್ಟ್ರೀಯ ಉರ್ದು ವಿಶ್ವವಿದ್ಯಾಲಯಕ್ಕೆ 'ಅಖಿಲ ಭಾರತ ಹೊರನಾಡ ಕನ್ನಡ ಸಂಘಗಳ 7ನೇ ಮಹಾಮೇಳ' ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋಗಿದ್ದೆವು.

ನಾವು ಹೈದರಾಬಾದಿಗೆ ಹೋಗುವ ಸುದ್ದಿ ತಿಳಿದ ಕೆಲ ಸಾಹಿತಿ ಮಿತ್ರರು ನಮಗೆ ದೂರವಾಣಿ ಮೂಲಕ ಅಭಿನಂದನೆ ತಿಳಿಸಿ 'ಹೈದರಾಬಾದ್ ಮುತ್ತು ಹೇಗೆ ಪ್ರಸಿದ್ಧವೋ ಹಾಗೆ ಅಲ್ಲಿನ ಬಿರಿಯಾನಿಯೂ ಪ್ರಸಿದ್ಧ. ಅದರಲ್ಲೂ ಚಾರ್ಮಿನಾರ್ ಸಮೀಪದ 'ಓಲ್ಡ್ ಬಾವರ್ಚಿ' ಹೋಟೆಲ್‌ನಲ್ಲಿ ಸಿಗುವ ಬಿರಿಯಾನಿಯಂತೂ ಜಗತ್ಪ್ರಸಿದ್ಧ. ಹೇಗೂ ಹೋಗುತ್ತೀರಿ. ಬಿರಿಯಾನಿ ತಿಂದೇ ಬನ್ನಿ' ಎಂದರು.



ಹೋದ ಮೊದಲ ಎರಡು ದಿನ ಬೆಳಿಗ್ಗೆಯಿಂದ ರಾತ್ರಿಯ ತನಕ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳು ಇದ್ದುದರಿಂದ ನಮಗೆ ಹೊರಗೆ ತಿರುಗಾಡಲಾಗಲಿಲ್ಲ. ಮೂರು ಹೊತ್ತೂ ಅಚ್ಚುಕಟ್ಟಾದ ಊಟ ಉಪಾಹಾರದ ವ್ಯವಸ್ಥೆಯನ್ನೂ ಸಂಘಟಕರು ಮಾಡಿದ್ದರಿಂದ ತಿನ್ನುವುದಕ್ಕಾಗಿ ಹೊರಗೆ ಹೋಗುವ ಅವಶ್ಯಕತೆಯೂ ಬರಲಿಲ್ಲ. ಮೂರನೆ ದಿನ ನಾವು ಊರಿಗೆ ವಾಪಾಸಾಗುವ ದಿನವಾಗಿತ್ತು. ನಮ್ಮ ರೈಲು ರಾತ್ರಿ 9 ಗಂಟೆಗೆ ಇದ್ದುದರಿಂದ ಹಗಲಿಡೀ ಹೈದರಾಬಾದ್ ಸುತ್ತಾಡುವುದು, ಕೊನೆಗೆ ಎಲ್ಲರೂ ಬಿರಿಯಾನಿ ತಿಂದು ರೈಲು ಹತ್ತುವುದೆಂದು ತೀರ್ಮಾನಿಸಿದೆವು. ನಮಗೆ ನಮ್ಮಂತೆ ಅಲ್ಲಿಗೆ ಬಂದ ಕೆಲವು ಸಾಹಿತಿಗಳು ಗೆಳೆಯರಾದರು. ಅವರೂ ನಮ್ಮ ಜೊತೆಗೂಡಿದರು. ನಾವೆಲ್ಲರೂ ಒಟ್ಟು ಸೇರಿ ಒಂದು ವಾಹನವನ್ನು ಗೊತ್ತುಮಾಡಿ ಹೈದರಾಬಾದ್ ಸುತ್ತಲು ಹೊರಟೆವು.

ಮೊದಲು ಬಿರ್ಲಾ ಮಂದಿರ ನೋಡಿದೆವು. ಆಮೇಲೆ ಸಾಲಾರ್ ಜಂಗ್ ಮ್ಯೂಸಿಯಂ ನೋಡಲು ಹೊರಟೆವು. ಎಷ್ಟು ನೋಡಿದರೂ ಮುಗಿಯದ ಮ್ಯೂಸಿಯಂನಲ್ಲೇ ನಮ್ಮ ಸಮಯವೆಲ್ಲ ಕಳೆದು ಹೋಯಿತು. ಆಗಲೇ ಗಂಟೆ ಎರಡಾಗಿತ್ತು. 'ಇನ್ನೂ ನೋಡುವ ಜಾಗ ಹಲವಿದೆ. ಊಟ ಮಾಡುತ್ತ ಕೂರಲು ವೇಳೆ ಇಲ್ಲ. ಹಸಿವೆಯೂ ಆಗಿಲ್ಲ. ಸುಡುವ ಬಿಸಿಲು ಬೇರೆ ಇದೆ. ಹಾಗಾಗಿ ತಣ್ಣಗಿನ ಆಹಾರವಾದ ಫ್ರುಟ್ಸಲಾಡ್, ಬಾಳೆಹಣ್ಣು, ಕಬ್ಬಿನ ಹಾಲು ಸೇವಿಸೋಣ' ಎಂದರು ಒಬ್ಬರು. ನಾವೆಲ್ಲರೂ ಅದನ್ನು ಅನುಮೋದಿಸಿದೆವು. ಮನಾಲಿ ಒಬ್ಬಳನ್ನು ಬಿಟ್ಟು. ಅವಳಿಗೆ ಬಿರಿಯಾನಿಯದೇ ಕನಸು. ಅವಳು ಏನೂ ತಿನ್ನಲಿಲ್ಲ. ತಿನ್ನು ಎಂದು ಒತ್ತಾಯಿಸಿದ್ದಕ್ಕೆ 'ಸಂಜೆ ಹೇಗೂ ಬಿರಿಯಾನಿ ಸಿಗುತ್ತದೆಯಲ್ಲಾ. ಅದೇ ಸಾಕು. ಈಗ ಏನೂ ಬೇಡ' ಎಂದಳು.

ನಂತರ ಚಾರ್ಮಿನಾರ್ ನೋಡಲು ಹೋದೆವು. ಅಲ್ಲಿ ತುಂಬ ರಶ್ಶು ಇತ್ತು. ಉದ್ದದ ಕ್ಯೂನಲ್ಲಿ ನಿಂತು ಚಾರ್ಮಿನಾರ್ ಹತ್ತಿ ಇಳಿಯುವಾಗ ಗಂಟೆ ಮೂರು. ಚಾರ್ಮಿನಾರ್ ಸುತ್ತ ಮುತ್ತ ಮುತ್ತು, ಚಪ್ಪಲಿ, ಬಟ್ಟೆ, ಬ್ಯಾಗ್, ವಾಚು, ಬಳೆ, ಆಟದ ಸಾಮಾನು, ಕರಕುಶಲ ವಸ್ತುಗಳು ಹೀಗೆ ಮಹಿಳೆಯರನ್ನು ಆಕರ್ಷಿಸುವ ಎಲ್ಲಾ ವಸ್ತುಗಳಿರುವ ಭಾರತದಲ್ಲೇ ಹೆಸರುವಾಸಿಯಾದ ಶಾಪಿಂಗ್ ಸೆಂಟರ್ ಇದೆ. ಅಲ್ಲಿಗೆ ಹೋದ ಮೇಲೆ ಕೇಳಬೇಕೆ? ನಾವೆಲ್ಲರೂ ನಮ್ಮ ಮನೆಯವರಿಗೆ, ಬಂಧುಗಳಿಗೆ ಹೈದರಾಬಾದ್ ನೆನಪಿಗಾಗಿ ಸಮಯದ ಪರಿವೆಯಿಲ್ಲದೆ ಸಾಮಾನು ಕೊಳ್ಳತೊಡಗಿದೆವು. ಅಷ್ಟು ಹೊತ್ತಿಗೆ ಸಂಜೆ ಆಗಿತ್ತು. ಇಲ್ಲೇ ಸಮೀಪ ಇರುವ ಲುಂಬಿನಿ ಪಾರ್ಕನ್ನು ನೋಡಿ ಎಲ್ಲರೂ ಜೊತೆಯಲ್ಲಿ ಬಿರಿಯಾನಿ ತಿಂದು ನಮ್ಮ ನಮ್ಮ ಊರಿಗೆ ತೆರಳೋಣ ಎಂದು ಮಾತಾಡಿಕೊಂಡೆವು. ಪಾಪ, ಮಧ್ಯಾಹ್ನ ಏನನ್ನೂ ತಿನ್ನದಿದ್ದರೂ, ಹಸಿವೆಯಾಗುತ್ತಿದ್ದರೂ ಮನಾಲಿ ಗಲಾಟೆ ಮಾಡದೆ ಮೌನವಾಗಿದ್ದಳು. ಲುಂಬಿನಿ ಪಾರ್ಕ್‌ನ ಹುಲ್ಲುಹಾಸಿನಲ್ಲಿ ಕುಳಿತು ಕಣ್ಣು ಹಾಯಿಸಿದಷ್ಟು ಉದ್ದಕ್ಕೂ ಕಾಣುವ ನೀರು ಮತ್ತು ಅದರಲ್ಲಿ ತೇಲುವ ದೋಣಿ ನೋಡುತ್ತ ರಾತ್ರಿ ಸಮೀಪಿಸಿದ್ದೇ ಗೊತ್ತಾಗಲಿಲ್ಲ. ಅಲ್ಲಿಂದ ನಮ್ಮ ರೈಲ್ವೇ ಸ್ಟೇಶನ್ ಕಾಚಿಗುಡ ಬಹಳ ದೂರದಲ್ಲಿತ್ತು. ಹೋಟೆಲಿಗೆ ಹೋಗಿ ಬಿರಿಯಾನಿ ತಿನ್ನುತ್ತ ಕೂತರೆ ರೈಲು ತಪ್ಪಿ ಹೋಗುವುದರಲ್ಲಿ ಯಾವುದೇ ಸಂಶಯ ಇರಲಿಲ್ಲ. ಏನು ಮಾಡುವುದೆಂದು ಚಿಂತಿತರಾದೆವು.

ಬಿರಿಯಾನಿ ತಿನ್ನಲು ಇಲ್ಲ ಎಂದು ಮನಾಲಿ ಕಣ್ಣಲ್ಲಿ ನೀರು ಇಣುಕಲು ತಯಾರಾಗಿತ್ತು. ನಮ್ಮ ಉಳಿದ ಗೆಳೆಯರು ಮಾತ್ರ ನಿಶ್ಚಿಂತರಾಗಿದ್ದರು. ಏಕೆಂದರೆ ಅವರ ರೈಲು ರಾತ್ರಿ 11 ಗಂಟೆಗೆ ಇತ್ತು. ನಾವು ಕೂಡಲೇ ಹೊರಟು ಬಿಡಬೇಕಿತ್ತು. ಅವರಿಂದ ಬೀಳ್ಕೊಂಡು ರೈಲ್ವೇ ಸ್ಟೇಶನ್‌ಗೆ ಹೋಗುವ ಆಟೊ ಹಿಡಿದೆವು. ಆಟೋದವನಿಗೆ ದಾರಿಯಲ್ಲಿ ಬಿರಿಯಾನಿ ಸಿಗುವ ಹೋಟೆಲ್ ಸಿಕ್ಕರೆ ಆಟೊ ನಿಲ್ಲಿಸಿ ಬಿರಿಯಾನಿ ಕಟ್ಟಿಸಿಕೊಂಡು ತರಲು ಸ್ಮಿತಾ ಹೇಳಿದಳು. ನಾನು ಅವನಿಗೆ 'ಬಿರಿಯಾನಿ ಯಾವುದರಿಂದ ಮಾಡುತ್ತಾರೆ?' ಎಂದು ಕೇಳಿದೆ. ಅದಕ್ಕೆ ಅವನು ಚಿಕನ್ ಇಲ್ಲವೇ ಮಟನ್‌ನಿಂದ' ಎಂದ. 'ಹಾಗಾದರೆ ನನಗೆ ಬಿರಿಯಾನಿ ಬೇಡ. ನಾನು ಶುದ್ಧ ಸಸ್ಯಾಹಾರಿ. ನನಗೆ ಒಬ್ಬಳಿಗೆ ದೋಸೆ ಅಥವಾ ಇಡ್ಲಿ ತನ್ನಿ' ಎಂದು ಹೇಳಿದೆ. 'ಬಿರಿಯಾನಿ ಹೋಟೆಲುಗಳಲ್ಲಿ ದೋಸೆ, ಇಡ್ಲಿ, ಚಪಾತಿ ಇತ್ಯಾದಿ ತಿಂಡಿ ಸಿಗುವುದಿಲ್ಲ. ಬಿರಿಯಾನಿ ಮಾತ್ರ ಸಿಗುತ್ತದೆ' ಎಂದು ಅವನು ಹೇಳಿದ. ಅರ್ಧ ದಾರಿ ಕ್ರಮಿಸುವಷ್ಟರಲ್ಲಿ ಸಿಕ್ಕ ಯಾವುದೋ ಒಂದು ಹೋಟೆಲಿನಿಂದ ಬಿರಿಯಾನಿ ತೆಗೆದುಕೊಂಡು ಬಂದ. ನಾವು ಸ್ಟೇಶನ್ ತಲುಪುವುದಕ್ಕೂ ರೈಲು ಬರುವುದಕ್ಕೂ ಸರಿಯಾಗಿತ್ತು. ರೈಲು ಹತ್ತಿ ಆರಾಮವಾಗಿ ಕೂತು ಬಿರಿಯಾನಿ ಪ್ಯಾಕೆಟ್ ಬಿಚ್ಚಿ ಮಗಳಿಗೆ, ಗಂಡನಿಗೆ, ಬೇಡವೆಂದ ನನಗೂ ಒತ್ತಾಯಪೂರ್ವಕ ಕೊಟ್ಟು ತಾನೂ ತಿನ್ನುತ್ತ ಸ್ಮಿತಾ 'ಓ, ಇಷ್ಟೆಯಾ ಹೈದರಾಬಾದ್ ಬಿರಿಯಾನಿಯೆಂದರೆ! ನಾನೇನೋ ಮಹಾ ಅಂದುಕೊಂಡಿದ್ದೆ. ಇದಕ್ಕಿಂತ ಚೆನ್ನಾಗಿ ಬಿರಿಯಾನಿ ನಾನು ಮಾಡುತ್ತೇನೆ' ಎಂದು ಸಪ್ಪೆ ಮೋರೆ ಮಾಡಿದಳು. ಮನಾಲಿಯೂ 'ಹೌದು, ಅಮ್ಮ ಇದಕ್ಕಿಂತ ಚೆನ್ನಾಗಿ ಮಾಡುತ್ತಾಳೆ' ಎಂದಳು. ಬಿರಿಯಾನಿ ರುಚಿ ಗೊತ್ತಿರದ ನಾನು ತಿನ್ನುತ್ತಿದ್ದ ಅವರ ಮುಖವನ್ನೇ ನೋಡುತ್ತ 'ಅದ್ಭುತವಾಗಿದೆ ಸ್ಮಿತಾ. ಇನ್ನೂ ಸ್ವಲ್ಪ ಕೊಡು' ಎಂದೆ.

ಈಗಲೂ ಹೈದರಾಬಾದ್ ಎನ್ನುವಾಗ ನಾನು ಜೀವನದಲ್ಲಿ ಒಮ್ಮೆ ಮಾತ್ರ ತಿಂದ ಬಿರಿಯಾನಿಯ ನೆನಪಾಗುತ್ತದೆ. ■